

## ಅವನೂ ಅವಳೂ

ತನ್ನ ನೀಲಿ ವೆಸ್ಪಾ ನಿಲ್ಲಿಸಿ,
ಸಾರಿ ಡಿಯರ್, ಲೇಟಾಯ್ತು
ಎನ್ನುತ್ತ ಕೂತ ಅವಳ
ಭುಜ ಬಳಸಿ.
ನಸುಗೋಪ ತೋರಿ
ಕೆನ್ನೆಯುಬ್ಬಿಸಿದ ಅವಳ ಕಿವಿಯಲ್ಲಿ
ಪಿಸುಮಾತೊಂದ ಉಸುರಿದ.
ಅದೇನು ಮೋಡಿಯೋ!
ನಸುನಕ್ಕು, ಅವನ ತೊಡೆಗೆ
ಗುದ್ದಿದಳು ಮೆಲ್ಲನೆ
ಕೋಪವೆಲ್ಲ ಮಾಯ!...

ದ್ರಾಕ್ಷಿಹಣ್ಣಿನಂಥ ಅವಳ ಕಣ್ಣ ಕಪ್ಪಿನಲಿ
ಕಳೆದುಹೋಗುತ್ತಾನವನು...
ಸಾಕ್ಷಿಯಾಗಿದೆ ಅವರು ಕೂತ
ಬೆಂಚಿನ ಆ ಕಡುಗೆಂಪು
ಗೋಡೆಯ ಮೇಲಿನ ನುಣುಪು
ಕಲ್ಲುಗಳ ಚಿತ್ತಾರ
ಹೂ ತುಂಬಿದ ಗಿಡದ ಕಂಪು.

ಅವನೆದೆಯ ರೋಮದಲ್ಲಿ
ಬೆರಳಾಡಿಸುತ್ತಾ ಅದೇನೋ
ಉಲಿದಳು. ಅದಕವಳ ಗಲ್ಲವ
ಮೆಲ್ಲನೆತ್ತಿ ಅವನೆಂದ:
'ನನ್ನದು ಸ್ಟೆಪ್ನಿಯೇ ಇಲ್ಲದ ವೆಸ್ಪಾ
ಇನ್ನಾದರೂ ನನ್ನ ನಂಬೇ ಸ್ವಲ್ಪಾ!'

ಕಿಲಕಿಲನೆ ನಕ್ಕಳು ಲಲನೆ!
ನೋಟಗಳ ಬೆಸೆಯುತ್ತ
ಬಿಸಿ ಕಾಫಿ ಹೀರುವ ಸುಖಕ್ಕಾಗಿ
ಹಿಂಬದಿಯ ರೆಸ್ಟೋರೆಂಟಿಗೆ ತೆರಳಿದ್ದಾರೆ...

ಅವನೂ ಅವಳೂ

● ನಳಿನಿ ಆರ್.

## ಗೋಡೆ ಚಿತ್ತಾರ

ಎಲ್ಲೆಲ್ಲಿಯೋ ನೀರ ದಾರಿಯಲಿ
ಉರುಳಿ ಮುಂದೋಡಲು ಸೋತು
ನಡೆದಷ್ಟು ನುಣ್ಣಗಾಗಿ
ಬಣ್ಣ ಬಣ್ಣದ ಬದುಕಾಗಿ
ಬಯಕೆಗಳ ಹೂವಾಗಿ
ಗೋಡೆಯ ಮೈತುಂಬ ಚಿತ್ತಾರವಾಗಿವೆ

ಒಂಟಿ ಕಣ್ಣ ಕಿಟಕಿ
ಹೊರಗೋ ಒಳಗೋ ಬೆಳಕಾಡಿ
ಚಿತ್ರಗಳ ಚೆಲುವಾಡಿ
ಆಡುವ ಜೀವಗಳ ತಡಕಾಡಿ
ಕಾಯುತ್ತ ಕುಂತಿದೆ
ಮಕ್ಕಳೋ, ಕೂಸುಗಳೋ
ಆಡುವ ದನಿಗಾಗಿ ಹಸಿದು

ಸದಾ ನಿಂತ ಡೆಸ್ಕು
ನಿಂತಲ್ಲಿಯೇ ಹೂವಾಗಿ
ಅರಳಿದ ಕುಂಡ
ಓಡಬೇಕೆಂಬ ಬಯಕೆಯ ಸ್ಕೂಟರ್

ಬದುಕಿನ ಪಾಡುಗಳ
ಹಾಡುತ್ತಲೆ ಇವೆ ಎಲ್ಲ
ಗೋಡೆಯನು ನಂಬಿ

● ನಾಗಣ್ಣ ಕಿಲಾರಿ